**2020 (1702) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) :–** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಈ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಯೋಜಕ/ಪ್ರೇರಕ/ಸಹ ಪ್ರೇರಕರ ಸಂಖ್ಯೆ ಎಷ್ಟು;

ಇ) ಪ್ರೇರಕ/ಸಹ ಪ್ರೇರಕರುಗಳಿಗೆ ಎಷ್ಟು ತಿಂಗಳ ಗೌರವಧನ ಸರ್ಕಾರದಿಂದ ಪಾವತಿಯಾಗಬೇಕಾಗಿದೆ;

ಈ) ನಿಯಮಿತವಾಗಿ ಗೌರವಧನ ಪಾವತಿಯಾಗದಿರಲು ಕಾರಣವೇನು;

ಉ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು;

ಊ) ಈ ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಸೌಲಭ್ಯವಿದೆಯೇ;

ಋ) ಹಾಗಿದ್ದಲ್ಲಿ, ಈ ಕೇಂದ್ರಗಳಿಗೆ ಒದಗಿಸಿರುವ ಮೂಲಭೂತ ಸೌಕರ್ಯಗಳೇನು?

**ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :**

ಅ) ರಾಜ್ಯದಲ್ಲಿ ಇರುವ ಮುಂದುವರಿಕೆ ಶಿಕ್ಷಣ ಕೇಂದ್ರಗಳ ಸಂಖ್ಯೆ 16633.

ಆ) ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಯೋಜಕರ ಸಂಖ್ಯೆ 213, ಪ್ರೇರಕ/ಉಪ ಪ್ರೇರಕರ ಸಂಖ್ಯೆ 30114.

ಇ) 27 ಜಿಲ್ಲಾ ಸಾಕ್ಷರತಾ ಸಮಿತಿ ವರದಿಗಳ ಪ್ರಕಾರ 2 ರಿಂದ 57 ತಿಂಗಳ ಗೌರವಧನ ಪಾವತಿಯಾಗಬೇಕಾಗಿದೆ.

ಈ) ಜಿಲ್ಲಾ ಸಾಕ್ಷರತಾ ಸಮಿತಿಗಳು ಸಕಾಲದಲ್ಲಿ ಸರಿಯಾದ ಲೆಕ್ಕ ಪರಿಶೋಧನಾ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸದಿರುವುದರಿಂದ ಮತ್ತು ಕೇಂದ್ರ ಸರ್ಕಾರವು ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡದೆ ಇರುವುದರಿಂದ ನಿಯಮಿತವಾಗಿ ಗೌರವಧನ ಪಾವತಿಸಲು ಸಾಧ್ಯವಾಗಿರುವುದಿಲ್ಲ.

ಉ) ಹೌದು,

ಜಿಲ್ಲಾ ಸಾಕ್ಷರತಾ ಸಮಿತಿಗಳು ಲೆಕ್ಕ ಪರಿಶೋಧನಾ ವರದಿಗಳನ್ನು ಸಕಾಲದಲ್ಲಿ ಸಲ್ಲಿಸಲು ಒತ್ತಾಯಿಸಿ ತರಿಸಿಕೊಂಡು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ, ಕೇಂದ್ರ ಸರ್ಕಾರವು

ಅನುದಾನವನ್ನು ಬಿಡುಗಡೆ ಮಾಡುವಂತೆ ಪತ್ರ ವ್ಯವಹಾರ, ದೂರವಾಣಿ ಮತ್ತು ಕಛೇರಿಗೆ ಭೇಟಿ ನೀಡುವುದರ ಮೂಲಕ ಒತ್ತಾಯ ತರಲಾಗುತ್ತಿದೆ, ದಿನಾಂಕ : 24–12–2004 ರಂದು ಸುತ್ತೋಲೆಯನ್ನು ಹೊರಡಿಸಿ ಪ್ರತಿ ಗ್ರಾಮ ಪಂಚಾಯಿತಿಯು ತನ್ನ ಆಯವ್ಯಯದಲ್ಲಿ ರೂ.25.000/– ಗಳನ್ನು ತಾತ್ಕಾಲಿಕವಾಗಿ ಪ್ರೇರಕರ ಗೌರವಧನ ಪಾವತಿಸಲು ಸೇರಿ ಸಾಕ್ಷರತಾ ಕಾರ್ಯಕ್ರಮಕ್ಕೆ ತೆಗೆದಿಡಲು ಸೂಚಿಸಲಾಗಿದೆ.

ಊ) ಈ ಕೇಂದ್ರಗಳ ಕಾರ್ಯ ನಿರ್ವಹಿಸಲು ಸ್ವಂತ ಕಟ್ಟಡಗಳ ಸೌಲಭ್ಯವಿರುವುದಿಲ್ಲ.

ಋ) ಈ ಕೇಂದ್ರಗಳ ಕಾರ್ಯ ನಿರ್ವಹಿಸಲು ಶಾಲೆ, ಅಂಗನವಾಡಿ, ಸಮುದಾಯ ಭವನ ಮತ್ತು ಖಾಸಗಿ ಕೊಠಡಿಗಳ ಸೌಲಭ್ಯವನ್ನು ಒದಗಿಸಲಾಗಿದೆ, ಅಲ್ಮೇರಾ, ಮೇಜು ಕುರ್ಚಿ, ಕಲಿಕಾ ಬೋಧನಾ ಸಾಮಗ್ರಿ, ಕ್ರೀಡೆ ಮತ್ತು ಮನೋರಂಜನಾ ಸಾಮಗ್ರಿಗಳ ಸೌಲಭ್ಯಗಳನ್ನು ಕೇಂದ್ರದ ಹಲವು ಚಟುವಟಿಕೆಗಳನ್ನು ನಡೆಸಲು ಒದಗಿಸಲಾಗಿದೆ.

**2021 (2192) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :–** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಲ್ಲಿ ಇರುವ ವಿವಿಧ ಇಂಜಿನಿಯರ್ ಹುದ್ದೆಗಳು ಯಾವುವು ಹಾಗೂ ಈ ಹುದ್ದೆಗಳಲ್ಲಿ ಯಾರು ಯಾರು ಎಷ್ಟೆಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದರೆ (ವಿವರಗಳನ್ನು ನೀಡುವುದು);

ಆ) ಇವರುಗಳ ಪೈಕಿ, ಎಷ್ಟು ಜನರು ಮಂಡಳಿಯ ಸೇವೆಗೆ ಸೇರಿದವರಾಗಿದ್ದಾರೆ ಹಾಗೂ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಅಧಿಕಾರಿ ನೌಕರರು ನಿಯೋಜನೆ/ಎರವಲು ಸೇವೆಯ ಮೇಲಿದ್ದಾರೆ.

ಇ) ಇವರೆಲ್ಲರ ಪೈಕಿ, ಯಾವ ಯಾವ ಅಧಿಕಾರಿ/ನೌಕರರುಗಳ ಮೇಲೆ ಯಾವ ಯಾವ ಭ್ರಷ್ಟಾಚಾರದ ಪ್ರಕರಣಗಳು ಮತ್ತು ವಿಚಾರಣೆಗಳು ಬಾಕಿ ಇವೆ (ಪ್ರಕರಣಗಳವಾರು ಪೂರ್ಣ ವಿವರಗಳನ್ನು ಒದಗಿಸುವುದು);

ಈ) ಇಂತಹವರುಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ಅವರವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸುವ ಬಗ್ಗೆ ಸರ್ಕಾರದ ಮುಂದಿರುವ ಕ್ರಮಗಳೇನು?

**ಶ್ರೀ ಡಿ.ಟಿ. ಜಯಕುಮಾರ್ (ಮಾನ್ಯ ವಸತಿ ಸಚಿವರು) :**

ಅ) ಸರ್ಕಾರದಿಂದ ಈ ಮಂಡಳಿಗೆ ಕೆಳಕಂಡ ಇಂಜಿನಿಯರ್ ಹುದ್ದೆಗಳು ಮಂಜೂರಾಗಿರುತ್ತದೆ.